ಕೋಣೆಯನ್ನು ತಲಾಶು ಮಾಡಲು ಆಕೆ ಆಕ್ಷೇಪವೇನೂ ಎತ್ತಲಿಲ್ಲ. ಆದರೆ ನಮಗೆ ಅಲ್ಲಿ ಏನೂ ಸುಳಿವು ಸಿಗಲಿಲ್ಲ.

ಕಿಚನ್‌ನಲ್ಲಿದ್ದ ಪುಷ್ಪಾಳ ಮೋರೆ ಕಳಾಹೀನವಾಗಿತ್ತು. ಮನೆಯಲ್ಲಿ ನಡೆದ ಅಹಿತಕರ ಘಟನೆಗಳಿಂದ ನೊಂದ ಹೆಣ್ಣು!

"ನನ್ಗೆ ಏನೂ ಗೊತ್ತಾಗ್ತಿಲ್ಲ. ಮಗ ಕಳ್ಳ ಅಲ್ಲ ಅಂತ ಅಂತರಾತ್ಮ ಹೇಳುತ್ತೆ. ಇವ್ರ ತಲೆಲಿ ಹುಳ ಹಿಡ್ದಿದೆ. ಈ ವಿಷ್ಯವಾಗಿ ಮನೆ ರಣಾಂಗಣವಾಗಿದೆ. ನೀವು ಇದ್ಕೊಂದು ಪರಿಹಾರ ಕೊಡ್ತೀರಿ ಅಂತ ಭಾವಿಸ್ತೀನಿ."

"ಬೋಪಣ್ಣ ಹೇಳ್ದ್ರು, ಹಣ ಕಳುವಾಗಿದ್ದನ್ನು ನಿಮ್ಗೆ ತೋರಿಸಿದ್ದಾರೆ ಅಂತ!"

"ಯಾವಾಗ್ಲೋ ಒಮ್ಮೆ ಹೇಳಿದ್ರು. ಹಿಂದಿನ ದಿವ್ಸ ಇಟ್ಟಿದ್ದ ಹಣದ ಲೆಕ್ಕ ಬರೆದಿಟ್ಟಿದ್ದೀನಿ ಅಂತ. ನಾನೇನು ಹಣ ಅಷ್ಟೇ ಇತ್ತಾ ಅಂತ ನೋಡ್ಲಿಲ್ಲ. ಅವರು ತೋರಿಸಿದಾಗ ಕಮ್ಮಿ ಇದ್ದಿದ್ದು ಹೌದು. ಆದ್ರೆ ಹಣ ಅಷ್ಟೇ ಇಟ್ಟಿದ್ರಾ ಅಥವಾ ಬೇರೆ ಕಡೆ ಇಟ್ಟಿದ್ರಾ ಅಂತ ಗೊತ್ತಿಲ್ಲ. ಅವ್ರು ಹಣ ಇರಿಸಿದ್ದು ಯಾವಾಗ ಅನ್ನೋದೆಲ್ಲಾ ತಿಳಿಯದು. ಅವ್ರಿಗೆ ಮರೆವು ರೋಗ ಇದೆಯಾ ಅಂತ ಅನುಮಾನ."

ಆಕೆಯ ಕಣ್ಣಲ್ಲಿ ನೀರು. ಕಿಟಕಿಯಲ್ಲಿ, ತುಸು ದೂರದಲ್ಲಿ, ಹಳೆಯ ಷೆಡ್ ಒಂದರ ಬಳಿ, ನೆಲವನ್ನು ಅಗೆಯುತ್ತಿದ್ದ ವ್ಯಕ್ತಿಯೇ ನೀಲಕಂಠನಿರಬೇಕೆಂದು ಊಹಿಸಿದೆ.

ಕರಮಚಂದ ಮನೆಗೆ ಒಂದು ಸುತ್ತು ಹಾಕಿ, ಅಜಿತನ ಕೋಣೆಯ ಹಿಂಭಾಗದಲ್ಲಿದ್ದ ಕಿಟಕಿಯ ಹತ್ತಿರ ತಪಾಸಣೆಗೆ ತೊಡಗಿದ. ಗೋಡೆಯ ಸನಿಹವಿದ್ದ ಗಿಡಗಳ ಪಾತಿಯಲ್ಲಿ ನೆಲವನ್ನು ಮೆಲ್ಲನೆ ಗೀರಿ ನೋಡುತ್ತಿದ್ದುದನ್ನು ಗಮನಿಸಿದೆ. ನಾನು ನೀಲಕಂಠನೊಡನೆ ಮಾತಿಗಿಳಿದೆ.

"ಒಂದು ಅರ್ಥವಾಗ್ತಿಲ್ಲ ಸಾಹೇಬ್ರೆ. ಅಜಿತ್ ಕುಡಿಯೋಕೆ ಕಾಸು ತೆಗೀತಿದ್ದಾನೆಯೆ? ಯಜಮಾನರಿಗೆ ಮರೆವೆ? ಯಜಮಾನ್ತಿಯವರು ಜ್ಯುವೆಲ್ಲರಿಗೆ ಕಾಸು ಕೊಡುವುದು ಯಜಮಾನರಿಗೆ ಗೊತ್ತಾಗಬಾರದು ಅನ್ನುವುದೇಕೆ?" ಅದನ್ನು ಕೇಳಿ ನನ್ನ ಕಿವಿ ಚುರುಕಾಯಿತು. ಆತ ಇನ್ನಷ್ಟು ವಿವರ ನೀಡಿದ.

"ಯಜಮಾನ್ತಿಯವರು ಕೆಲವೊಮ್ಮೆ ನನ್ನಲ್ಲಿ ಹಣ ಕೊಟ್ಟು, ಲಕ್ಷ್ಮೀ ಜ್ಯೂವೆಲ್ಲರಿಗೆ ಕೊಟ್ಟು ಬರಲು ಹೇಳ್ತಾರೆ. ಆದರೆ ಯಜಮಾನರಿಗೆ ಗೊತ್ತಾಗಬಾರದು ಅಂತಾರೆ. ಅದು ಯಾಕೆ? ಸುಮಾರು ನಾಲ್ಕೈದು ಬಾರಿ ಹಣ ಕೊಟ್ಟಿದ್ದೇನೆ."

ಅಷ್ಟರಲ್ಲಿ ಮನೆಗೆ ಸುತ್ತು ಹೊಡೆದು ಬಂದ ಕರಮಚಂದ, ಬೀಗ ಹಾಕಿದ್ದ ಷೆಡ್‌ನ ಕಿಟಕಿಯಿಂದ ಇಣುಕಿ ನೋಡಿ, ವಿಚಾರಿಸಿದ,

"ಇಲ್ಲೇನಿದೆ ನೀಲಕಂಠ?"

"ಗೊಬ್ಬರ, ತೋಟಕ್ಕೆ ಬೇಕಾಗುವ ಸಾಮಾನುಗಳು. ಮಾಲೀಕರು ಇಟ್ಟಿದ್ದು. ಅವರ ಕೆಲಸಗಾರರು ಕೆಲವೊಮ್ಮೆ ಬಂದು ಒಯ್ಯುವುದಿದೆ. ಇಲ್ಲೇ ಕೆಳಗೆ ಅವರ ಎಸ್ಟೇಟು ಇದೆ."

"ಓಹ್! ತೋಟವೇ ಇಲ್ಲದ ನಿಮಗ್ಯಾಕೆ ಇದು ಅಂತ ಯೋಚಿಸಿದೆ... ಬಿದ್ದಪ್ಪ, ನಾವಿನ್ನು ಹೊರಡೋಣವೇ."

ಬೋಪಣ್ಣನಿಗೆ ತಿಳಿಸಿ, ನಾವು ಅಲ್ಲಿಂದ ಹೊರಟೆವು.

★★★

ಅಪರಾಹ್ನ ಗಣಕಯಂತ್ರದಲ್ಲಿ ಕರಮಚಂದ ಏನನ್ನೋ ಗಂಭೀರವಾಗಿ ಹುಡುಕಾಡುತ್ತಿದ್ದನಿತ್ತು. ದಿನಪತ್ರಿಕೆಯಲ್ಲಿ ಆಲಸ್ಯದಿಂದ ಕಣ್ಣಾಡಿಸುತ್ತಿದ್ದ ನಾನು ಆತನಲ್ಲಿ ನೀಲಕಂಠ ನೀಡಿದ ಮಾಹಿತಿಯನ್ನು ಹಂಚಿಕೊಂಡೆ. ಆತ ಜ್ಯುವೆಲ್ಲರಿಯ ಹೆಸರನ್ನು ಗುರುತು ಹಾಕಿಕೊಂಡ.